

ಶ್ರೀರಾಮ್ ಮತ್ತು ತೇಜಸ್ವಿ

ಮಹಾ ಪೇಪರ್ ಮಿಠಾಯಿ ಬನ್ರೀ, ಸುಮ್ನೆ' ಎಂದರೂ ಹೋಗಲಿಲ್ಲ. 'ಇದೇನ್ ಮಹಾ ಪೇಪರ್ ಮಿಠಾಯಿ?' ಇದೆಂಥ ಸ್ಲೋಗನ್ ಎಂದು ತಬ್ಬಿಬ್ಬಾದೆ. ನಂತರ ಅವರೇ ಹೇಳಿದರು, ಸೋನ್ಸ್ ಎಂಬ ಮರ ಕಡಿಯುವವನು ಭಾರೀ ದಿಮ್ಮಿಗಳನ್ನು ಜರುಗಿಸುವಾಗ ಸಂಗಡಿಗರಿಗೆ, 'ಇದೇನ್ ಮಹಾಪೇಪರ್ ಮಿಠಾಯ್' ಎಂದು ಉತ್ತೇಜಿಸುತ್ತಿದ್ದನಂತೆ! ನಮ್ಮಲ್ಲಿನ 'ಚಾಮುಂಡಮ್ಮ ಐಸಾ!' ನೆನಪಾಯಿತು.

ಈ ಸಮಾಜವಾದಿ ಗೆಳೆಯರ ಅನೇಕ ಮೀಟಿಂಗ್‌ಗಳು ಶಿವಮೊಗ್ಗದಲ್ಲಿದ್ದಾಗ, ತೇಜಸ್ವಿಯವರ ಪತ್ನಿ ರಾಜೇಶ್ವರಿ ಮತ್ತು ನಾನು 'ಚಿತ್ರಕೂಟ'ದಲ್ಲಿರಬೇಕಾಗಿತ್ತು. ಕಾಡಿನ ನಡುವೆ ತೋಟದ ಮನೆ; ನಾವಿಬ್ಬರು ಮತ್ತು ಕವಿ ಮಾಡಿದ ಕೆಲಸವನ್ನೇ ಮಾಡುತ್ತ, ಓದುತ್ತ ದಿನ ತುಂಬಿಸುತ್ತಿದ್ದೆವು.

ಪತ್ರಗಳಿಂದ ನಾವು ಪಡೆಯುತ್ತಿದ್ದ ಆನಂದ, ಸಂಭ್ರಮಗಳನ್ನು ಇಂದಿನ ಮೊಬೈಲ್‌ಗಳು ಕೊಡಲಾರವು. ನಮ್ಮ ಮದುವೆಯಾದ ಹೊಸತಿನಲ್ಲಿ ರಾಜೇಶ್ವರಿಯವರಿಂದ ನಮ್ಮವರಿಗೆ ಒಂದು ಪತ್ರ ಬಂದಿತು. ಪತ್ರದಲ್ಲಿ ನೀವು ಈ ಮೊದಲು ನಾವು ಹೇಳಿದ ಸಾಮಾನುಗಳನ್ನು ತರುತ್ತಿದ್ದೀರಿ. ಈಗ ಹೇಗೊ ಏನೊ, ಇಲ್ಲಿ ಸ್ನೇಹಿತರು ಸೇರುವುದರಿಂದ ನವಿಲುಕೋಸು, ಬೀಟ್‌ರೂಟ್, ಕ್ಯಾರಟ್, ಹುರಳೀಕಾಯಿ ಮತ್ತು 30 ಮೂಸಂಬಿ ಹಣ್ಣುಗಳು ಬೇಕು. ತರಲು ಸಾಧ್ಯವೇ ಎಂದಿತ್ತು. ನಾವು ತರಕಾರಿಗಳ ಜತೆಗೆ ಮೈಸೂರಿನ ಇಂದ್ರಭವನ್ ಸಿಹಿಗಳನ್ನು ತೆಗೆದುಕೊಂಡು ಹೊರಟೆವು. ಜನ್ನಾಪುರದಲ್ಲಿ ನಿಗದಿತ ದಿನ ಸಮಯಕ್ಕೆ ಕಾದಿದ್ದ ತೇಜಸ್ವಿ ನಮ್ಮನ್ನೂ ಹಣ್ಣು ತರಕಾರಿಗಳ ಮೂಟೆಯನ್ನೂ ಇಳಿಸಿಕೊಂಡರು.

ತೇಜಸ್ವಿಯವರ ಅತ್ಯುತ್ತಮ ಹಕ್ಕಿಗಳ ಚಿತ್ರಗಳನ್ನೊ ಮತ್ತಿತರ ಚಿತ್ರಗಳನ್ನೊ ನೋಡಿದಾಗ ಅವುಗಳ ಹಿಂದಿನ ಅವರ ಚುರುಕು ಕಣ್ಣುಗಳು, ಏಕಾಗ್ರತೆ, ಗಮನ ಅನುಭವಕ್ಕೆ ಬರದೇ ಇರದು. ಆದರೆ, ದೈನಂದಿನ ಸಾಮಾನ್ಯ ಕೆಲಸಗಳಲ್ಲೂ ಅವರ ಕಣ್ಣು, ಮೂಗು, ನಾಲಗೆ ಸೂಕ್ಷ್ಮ ರಸಗ್ರಹಣ ಅಂಗಗಳಾಗಿದ್ದವು. ಯಾವುದಾದರೂ ತಿಂಡಿಗೆ ಒಂದು ಹನಿ ಎಸೆನ್ಸ್ ಹೆಚ್ಚಾಗಿದ್ದರೆ, ಎರಡು ಕಾಳು